ದಿನಾಂಕ 10-02-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀABH ವಕೀಲರಿಂದ.**

ನಾನು ನ್ಯಾಯಾಲಯಕ್ಕೆ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಮತ್ತು ಅದರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುತ್ತವೆ. ನಾನು ಈ ದಾವೆಯನ್ನು ನನ್ನ ಸಹೋದರ ಮಂಜುನಾಥ ಇವರ ವಿರುದ್ಧ ಮಾತ್ರ ದಾಖಲಿಸಿರುತ್ತೇನೆ. ಭಾಗಕ್ಕಾಗಿ ದಾವೆ ಸಲ್ಲಿಸಿರುತ್ತೇನೆ.

ನನ್ನ ತಾತನ ಹೆಸರು ಹನುಮಂತಪ್ಪ ಎಂದು ಇರುತ್ತದೆ. ನನ್ನ ತಾತನಿಗೆ ಹನುಮಂತಪ್ಪ ಎಂಬ ಒಬ್ಬನೇ ಮಗನಿರುತ್ತಾನೆ. ನಾವು ಆರು ಜನ ಸಹೋದರ ಸಹೋದರಿಯರು ಇರುತ್ತೇವೆ. ಅವರುಗಳೆಂದರೆ ಅನಂತಕುಮಾರ , ಶ್ರೀದೇವಿ , ಮಂಜುಳಾ , ಮಂಜುನಾಥ , ಶೋಭಾ ಮತ್ತು ಪದ್ಮ ಎಂದು ಇರುತ್ತೇವೆ. ಸಹೋದರಿಯರು ಎಲ್ಲರು ಅವರ ಅವರ ಗಂಡನ ಮನೆಯಲ್ಲಿ ವಾಸವಿರುತ್ತಾರೆ. ನನ್ನ ತಂದೆ 2015 ಅಥವಾ 2016 ರಲ್ಲಿ ಮೃತರಾಗಿರುತ್ತಾರೆ, ನಿಖರವಾಗಿ ಹೇಳಲು ಬರುವುದಿಲ್ಲ.

ದಾವಾ ಜಮೀನು ಸರ್ವೆ ನಂ.448/1 ಕ್ಷೇತ್ರ 1 ಎಕರೆ 22 ಗುಂಟೆ ಗಬ್ಬೂರು ಸೀಮೆಯಲ್ಲಿ ಇರುತ್ತದೆ. ಮನೆ ನಂಬರ 1154 ಎಂದು ಇರುತ್ತದೆ. ಸದರಿ ಮನೆ ಸಹ ಗಬ್ಬೂರು ಗ್ರಾಮದಲ್ಲಿ ಇರುತ್ತದೆ. ಸದರಿ ಮನೆಯ ವಿಸ್ತೀರ್ಣ 30x40 ಚದರ ಅಡಿ ಇರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೇಳಿರುತ್ತಾರೆ , ಕಾಲವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.